ತಲೆ ಮೇಲಕ್ಕೆತ್ತದೇ ಅನ್ನದುಂಡೆಯನ್ನು ಇಡಿಯಾಗಿ ಬಾಯಿಗೆ ತುರುಕಿಕೊಳ್ಳುತ್ತಿದ್ದ ಶೇಖರ. ಅವಳು ಮತ್ತೆ ಮಾತು ಮುಂದುವರಿಸಿದಳು.

"ಅಲ್ಲ, ಈ ಕೋಲು ಎಲ್ಲಿ ಹೋಯಿತು ಅಂತ! ನಾನು ಈ ಮನೆಗೆ ಕಾಲಿಟ್ಟ ದಿನದಿಂದ ನೋಡುತ್ತಿದ್ದೇನೆ. ಒಂದು ವಸ್ತು ಆಚೀಚೆ ಆದದ್ದಿಲ್ಲ. ಮಕ್ಕಳನ್ನು ಕೇಳಿ ನೋಡಿದೆ. ಅವರೂ ಮುಟ್ಟೇ ಇಲ್ಲ ಅಂತಾರೆ. ಮತ್ತೆ ಯಾರು ತೆಗೊಂಡು ಹೋದರು. ಬರುವವಳೊಬ್ಬಳು ನಿಂಗಿ. ಎಲ್ಲಾದರೂ ಎತ್ತಿಟ್ಟಿರಬಹುದು ಅಂದರೆ, ಅವಳೂ ಎರಡು ದಿನದಿಂದ ರಜೆ ಬೇರೆ. ಮತ್ತೆ ಕೋಲು ಎಲ್ಲಿ ಹೋಯಿತು?" ಅವಳು ಗದ್ದಕ್ಕೆ ಕೈ ಊರಿ ಕುಳಿತಳು. ಒಲೆಯ ಮೇಲಿಟ್ಟ ಬಿಸಿ ನೀರು ಕೊತಕೊತನೆ ಕುದಿಯುತ್ತಿತ್ತು. ಅವನು ಬಾಯಿಯೊಳಗೆ ದಬ್ಬಿದ ಅನ್ನದ ಅಗುಳನ್ನು ಜಗಿಯದೇ ನುಂಗುತ್ತಿದ್ದ. ಅವನ ಅಸಹನೆ ಹೆಚ್ಚಾಗುತ್ತಾ ಇತ್ತು.

"ಇದೊಂದು ಮಹಾಭಾರತ ಮುಗಿಯೋದಿಲ್ಲ. ನೀನು ನನಗೆ ನೆಮ್ಮದಿಯಾಗಿ ಎರಡು ತುತ್ತು ಊಟ ಮಾಡುವುದಕ್ಕೆ ಬಿಡುತ್ತೀಯಾ? ಒಂದು ಬಿದಿರು ಕೋಲಿನ ದೆಸೆಯಿಂದ ಒಂದೊತ್ತು ಅನ್ನ ಸರಿಯಾಗಿ ತಿನ್ನಲು ಆಗದೇ ಹೋಯಿತು. ಬೇರೆ ಚಿಂತೆ ಇಲ್ಲದ್ದಕ್ಕೆ ಇದೊಂದು."

ಅನ್ನದ ತಟ್ಟೆಯ ಬದಿಯಲ್ಲಿ ಕುಡಿಯಲು ಇರಿಸಿದ್ದ ಬಿಸಿನೀರನ್ನು ಅರ್ಧ ಕುಡಿದು, ಒಮ್ಮೆಗೆ ಸುರಿದು ಎದ್ದ. ರುಕ್ಮಿಣಿಗೆ ಬೇಜಾರಾಯಿತು. ಬೆಳಗ್ಗಿನಿಂದ ಇದೇ ಆಯಿತು. ಅಮ್ಮ ಮಗನ ಮಧ್ಯೆ ಸಣ್ಣ ಮಾತಿನ ಚಕಮಕಿ. ಅತ್ತೆಗೂ ಅಷ್ಟೆಲ್ಲಾ ಹೇಳಬೇಕಾಗಿತ್ತಾ? ಒಂದು ಕೋಲು ತಾನೇ. ಮಾವನಿಗೆ ಬೇಸರವಾಗಿತ್ತು ನಿಜ. ಆದರೆ, ಬಾಯಿ ಬಿಟ್ಟು ಯಾರನ್ನೂ ಏನೂ ಅಂದಿರಲಿಲ್ಲ. ಇವರೂ ತಾಯಿಯ ಜೊತೆ ಮಾತಿಗೆ ಮಾತು ಸೇರಿಸಿದರು. ಈ ಎಲ್ಲಾ ಗಲಾಟೆಯಲ್ಲಿ ನೊಂದುಕೊಂಡವರು ಮಕ್ಕಳು. ಅವರಿಗೆ ಅಜ್ಜನ ಕೋಲು ನಾಪತ್ತೆಯಾದ ನೋವು ಎರಡು ರೀತಿಯಲ್ಲಿ ಕಾಡಿತ್ತು. ಒಂದು, ಅವರೇ ಎಲ್ಲೋ ಎತ್ತಿಕೊಂಡು ಹೋಗಿ ಬಿಸಾಕಿ ಬಂದಿರಬಹುದು, ಇಲ್ಲ ಮುರಿದಿರಬಹುದು ಎಂಬ ಎಲ್ಲರ ಗುಮಾನಿ. ಇನ್ನೊಂದು, ಅಜ್ಜನ ಸಪ್ಪೆ ಮೋರೆ. ಅಜ್ಜ ಅವರಿಗೆ ಅಪ್ಪ ಅಮ್ಮನಿಗಿಂತಲೂ ಹೆಚ್ಚು ಅರ್ಥ ಆಗುತ್ತಾರೆ ಅನ್ನಿಸುತ್ತಿತ್ತು. ಯಾವುದೇ ತಿನಿಸು ಇರಲಿ, ಬಾಯಿಗಿಡುವ ಮೊದಲು ಒಳಗೆ ಕುಳಿತಲ್ಲಿಂದಲೇ ಹೊರಗೆ ಕತ್ತು ಬಾಗಿಸಿ, ಕಣ್ಣು ಅರಳಿಸಿ ನೋಡುವ ಮೂಕ ಟಾಮಿಯ ತಟ್ಟೆಗೆ ಗುರಿಯಿಟ್ಟು ಒಂದೆರಡು ತುಣುಕು ಬಿಸಾಕುವುದನ್ನು ಮರೆತವರಲ್ಲ. ಅದು ತುಂಡು ದೋಸೆ, ಬಿಸ್ಕೇಟು ಏನೇ ಆಗಿರಬಹುದು. ಅಜ್ಜಿ ಭಜನೆಗೆ ಹೋದಾಗ ಸಿಕ್ಕ ಅವಲಕ್ಕಿ ಪ್ರಸಾದವನ್ನು ಅರ್ಧ ತಿಂದು, ಉಳಿದದ್ದನ್ನು ಯಾವುದೋ ಹಳೇ ಪೇಪರಲ್ಲಿ ಕಟ್ಟಿ ತಂದರೆ ಭಕ್ತಿಯಿಂದ ಕಣ್ಣಿಗೊತ್ತಿ ಅಜ್ಜ ತಿನ್ನುವಾಗ ಅದು ಅಜ್ಜಿಯ ಎಂಜಲು ಅಂತ ಯೋಚಿಸಿದ್ದೇ ಇಲ್ಲ. ಎಷ್ಟೇ ಹುಷಾರಿಲ್ಲದಿದ್ದರೂ ನಾಳೆ ಶಾಲೆ ಉಂಟಾ? ಪರೀಕ್ಷೆ ಯಾವಾಗ? ಚೆನ್ನಾಗಿ ಓದಿ ಅಂತ ತಲೆ ಸವರಿ ಹೇಳುವುದನ್ನು ಒಂದು ದಿನವೂ ಮರೆತವರೇ ಅಲ್ಲ. ಅಪ್ಪ ಅಮ್ಮನಿಗೆ ಯಾವುದೇ ಕಾರಣಕ್ಕೆ ಮಕ್ಕಳ ಮೇಲೆ ಕೋಪ ಬಂತೋ, ಏಟು ಬೈಗಳು ಸೋಕದ ಹಾಗೆ ಆವತ್ತು ಅಜ್ಜನ ವಿಶೇಷ ರಕ್ಷಣೆಯ ನೆರಳು. ಮನುಷ್ಯ ಬದುಕಿನಲ್ಲಿ ಸದ್ಯಕ್ಕೆ ದೀರ್ಘಾಯುಷ್ಯ ಎಂದು ದೇವರು ಕೊಟ್ಟರೆ, ಸಣ್ಣ ಸಣ್ಣ ಸಂಗತಿಗಳು ಭೌತಿಕ ಜಗತ್ತಿನ ಲೆಕ್ಕಾಚಾರದ ಹೊರತಾಗಿ ಮೌಲ್ಯಯುತವಾಗುವ ಎರಡು ಹಂತದ ವಯಸ್ಸುಗಳು ಇವು. ಪುಸ್ತಕದೆಡೆಯಲ್ಲಿ ಬಚ್ಚಿಟ್ಟ ಕಾಡು ಬಸಳೆಯ ಎಲೆ ಸಣ್ಣದಾಗಿ ಬೇರು ಬಿಟ್ಟಿದೆಯೆಂದು ಗೊತ್ತಾದಾಗ ಕುಣಿದಾಡುವ ಪುಟಾಣಿಗಳಿಗೆ ದಿನಾ ಊರಿ ನಡೆಯುವ ಅಜ್ಜನ ಕೋಲು ನಾಪತ್ತೆ ಎಂದಾಗ ಬೇಸರವಾಗದೆ ಇದ್ದೀತಾ? ಅವರೂ ಮುಸುಕೆಳೆದು ಮಲಗಿದಲ್ಲಿಂದ ಒಳಗೊಳಗೆ ಕುಸುಕುಸು ಅಂತ ಮಾತನಾಡಿಕೊಳ್ಳುವುದು ಕೋಲಿನದೇ ಗುಂಗಿನಲ್ಲಿದ್ದ ರುಕ್ಮಿಣಿಯ ಗಮನಕ್ಕೆ ಬಾರದಿರಲಿಲ್ಲ. ಅತ್ತೆ ಮಾವ ಅವರ ಕೋಣೆಯಲ್ಲಿ ಸಣ್ಣಗೆ ಮಾತನಾಡುವುದು ಕೇಳುತ್ತಿತ್ತು. ಅಡಿಗೆಮನೆಯ ಎಂಜಲು